O.S. No.93/2014
DW - 2

**ದಿನಾಂಕ ಃ-29-06-2017**
**ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.**

**ಪಾಟೀ ಸವಾಲು ಃ ವಾದಿಯ ಪರವಾಗಿ ಎಂ ಎಂ ಕೇ ವಕೀಲರಿಂದ**

**ನಾನು, ಪ್ರತಿವಾದಿ 2, 4, 6 ಮತ್ತು ವಾದಿಯರು ಖಾಸ ಸಹೋದರರು ಅನ್ನುವುದು ನಿಜ. 5ನೇ ಪ್ರತಿವಾದಿಯರು ನನಗೆ ತಂಗಿಯಾಗಬೇಕು. ನಮ್ಮೆಲ್ಲರ ಪೈಕಿ ನಾನೇ ಹಿರಿಯವನು ಅನ್ನುವುದು ಸುಳ್ಳು ಆದರೆ 2ನೇ ಪ್ರತಿವಾದಿ ಅಶೋಕ ನಮ್ಮೆಲ್ಲರಕ್ಕಿಂತ ದೊಡ್ಡವರು. ನನ್ನ ತಂದೆ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ಆಗಿದ್ದರು ಅನ್ನುವುದು ನಿಜ. ನನ್ನ ತಂದೆ 2008 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆಯ ಜೀವಿತ ಕಾಲದಲ್ಲಿ ನನಗಾಗಲಿ ಮತ್ತು ನನ್ನ ಸಹೋದರಗಾಗಲಿ ಯಾವುದೇ ತಂಟೆತಕರಾರು ಇದ್ದಿದ್ದಿಲ್ಲ.**

**ನನ್ನ ತಂದೆ ತಮ್ಮ ಜೀವಿತ ಕಾಲದಲ್ಲಿ ನಮ್ಮ ಕುಟುಂಬದ ಮನೆಗಳಿಗೆ ಸಂಬಂಧಪಟ್ಟಂತೆ ವಾಟ್ನಿ ಮಾಡಿಕೊಟ್ಟದ್ದು , ಅದರಂತೆ ದೆವಲಾಪೂರ ಗ್ರಾಮ ಪಂಚಾಯತಿಯವರು ಠರಾವ ನಂ. 4/1 ನ್ನು ದಿಃ 11-6-2007 ರಂದು ಮಾಡಿರುತ್ತಾರೆ ಅನ್ನುವುದು ಸುಳ್ಳು. ಸದರಿ ಠರಾವು ಆಗಿದ್ದ ನಾನು ಮೇಲಮನವಿ ಸಲ್ಲಿಸುವುದಿಲ್ಲ. ಸದರಿ ಠರಾವಿನ ಮೇರೆಗೆ ಗ್ರಾಮ ಪಂಚಾಯತಿ ನಂಃ 405 ಸುರೇಶ, ಹೀರಾಚಂದ, ಭೀಮಾವತಿ ಹಾಗೂ ಭರತೇಶ ಇವರ ಹೆಸರಿನಲ್ಲಿ ದಾಖಲಾಗಿರುತ್ತದೆ ಅನ್ನುವುದು ನಿಜ. ಅದರಂತೆ ಗ್ರಾಮ ಪಂಚಾಯತ ನಂಃ 407 ಅಶೋಕ ಮತ್ತು ಶ್ರೈನಿಕ ಇವರ ಹೆಸರಿನಲ್ಲಿ ದಾಖಲಾಗಿರುತ್ತದೆ ಅನ್ನುವುದು ನಿಜ. 4ನೇ ಪ್ರತಿವಾದಿ ಶ್ರೈನಿಕ ತನ್ನ ಪಾಲಿಗೆ ಬಂದ ಮನೆಯನ್ನು ರೂ.50/- ರ ಬಾಂಡ ಮೇಲೆ 2ನೇ ಪ್ರತಿವಾದಿ ಅಶೋಕ ಬಿಟ್ಟುಕೊಟ್ಟಿರುತ್ತಾನೆ ಅನ್ನುವುದು ನಿಜ. ಗ್ರಾಮ ಪಂಚಾಯತಿ ನಂಃ401 ನನ್ನ ಹೆಸರಿಗೆ ದಾಖಲಾಗಿರುತ್ತದೆ ಅನ್ನುವುದು ನಿಜ. 2007 ನೇ ಇಸವಿಯಿಂದ ನಮ್ಮ ನಮ್ಮ ಪಾಲಿಗೆ ಬಂದ ಮನೆಗಳನ್ನು ನಾವು ಪ್ರತೇಕವಾಗಿ ವೈವಾಟ ಮಾಡಿಕೊಂಡಿದ್ದು ಅನ್ನುವುದು ನಿಜ.**

**ದಾವಾ ಜಮೀನುಗಳು ಈಗಲೂ ಕೂಡಾ ನಮ್ಮ ತಂದೆ ಹೆಸರಿನಲ್ಲಿ ಇರುತ್ತದೆ ಅನ್ನುವುದು ನಿಜ. ನಮ್ಮ ತಂದೆ ತಮ್ಮ ಜೀವಿತ ಕಾಲದಲ್ಲಿ ಸದರಿ ಜಮೀನುಗಳನ್ನು ಸಾಗುವಳಿ ಮಾಡಲು ಅನುಕುಲವಾಗುವಂತೆ ಭಾಗ ಮಾಡಿಕೊಟ್ಟಿರುತ್ತಾರೆ ಅನ್ನುವುದು ಸುಳ್ಳು. ನನ್ನ ತಂದೆ**

ಅನುಕುಲವಾಗುವಂತಕ್ಕೆ ದಾವಾ ಜಮೀನುಗಳನ್ನು ಭಾಗ ಮಾಡಿ ಕೊಟ್ಟಿದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ನನ್ನ ತಂದೆ ತೀರುಕೊಂಡಿದ ನಂತರ ನಾವೆಲ್ಲ ಸಹೋದರರು ನಮ್ಮ ಅನುಕುಲಕ್ಕೆ ಭಾಗ ಮಾಡಿಕೊಂಡು ಸಾಗುವಳಿ ಮಾಡಿಕೊಂಡಿರುತ್ತೇವೆ. ನಾವು ಸಹೋದರರು ನನ್ನ ತಂದೆ ಜೀವಿತ ಕಾಲದಲ್ಲಿಯೆ ನಮ್ಮ ಅನುಕುಲತಕ್ಕಂತೆ ದಾವಾ ಜಮೀನುಗಳನ್ನು ಭಾಗ ಮಾಡಿ ಸಾಗುವಳಿ ಮಾಡಿಕೊಂಡಿ ಬಂದಿರುತ್ತೇವೆ ಅನ್ನುವುದು ನಿಜ. ಈ ರೀತಿಯಾಗಿ ನಾವು ಭಾಗ ಮಾಡಿಕೊಂಡು ಸಾಗುವಳಿ ಮಾಡಿಕೊಂಡು ಬರುತ್ತಿರುವುದರ ಕುರಿತು ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯ ಇದ್ದಿರಲಿಲ್ಲ ಅನ್ನುವುದು ನಿಜ.

ಸರ್ವೆ ನಂಃ29/3, 2 ಎಕರೆ ಜಮೀನು ವಾದಿಯರು ದಿಃ12-4-2007 ರಂದು ಜೀನ್ನಪ್ಪಾ ಅನ್ನುವುದರಿಂದ ಖರೀದಿ ಮಾಡಿರುತ್ತಾರೆ ಅಂದರೆ ಸಾಕ್ಷಿದಾರರು ಸದರಿ ಜಮೀನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಅನ್ನುತ್ತಾರೆ. ವಾದಿಯರಿಬ್ಬರು ಸದರಿ ಜಮೀನನ್ನು , ಅವರು ಭಾಗ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದ ಜಮೀನಿನ ಆದಾಯದಿಂದ ಮತ್ತು ಬೇರೆಯವರ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದ ಆದಾಯದಿಂದ ಖರೀದಿ ಮಾಡಿರುತ್ತಾರೆ ಅನ್ನುವುದು ಸುಳ್ಳು. ವಾದಿಯರಿಬ್ಬರು ದಿಃ 12-4-2007 ಸರ್ವೆ ನಂಃ 34/2 ಬಿ ಜಮೀನನ್ನು ಜೀನಪ್ಪ ಯವರಿಂದ ಖರೀದಿ ಮಾಡಿರುತ್ತಾರೆ ಅನ್ನುವುದು ಸುಳ್ಳು. ನನ್ನ ತಂದೆ ಸದರಿ ಜಮೀನುಗಳನ್ನು ಖರೀದಿ ಮಾಡುವಾಗ , ನೀವೆನಾದರೂ ಇಕರಾರು ಮಾಡಿರುತ್ತಿರಾ ಅಂದರೆ ಸಾಕ್ಷಿದಾರರು ತಕರಾರು ಮಾಡಿರುವುದಿಲ್ಲ , ಆಗ ನಾವೆಲ್ಲರು ಕೂಡಿ ಇದ್ದೀವಿ ಅನ್ನುತ್ತಾರೆ. ವಾದಿಯರಿಬ್ಬರು ಸದರಿ ಎರಡು ಜಮೀನುಗಳನ್ನು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದರಿಂದ ನಾನನಗಲಿ ನನ್ನ ಇನ್ನೂಳಿದ ಸಹೋರರಾಗಲಿ ತಕರಾರು ಮಾಡಿರುವುದಿಲ್ಲ ಅಂದರೆ ಸಾಕ್ಷಿದಾರರು ವಾದಿಯರಿಬ್ಬರು ತನ್ನ ಸ್ವಂತ ಆದಾಯದಿಂದ ಖರೀದಿ ಮಾಡಿರುವುದಿಲ್ಲ ಅನ್ನುತ್ತಾರೆ.

ದಾವಾ ಜಮೀನುಗಳು ನಮ್ಮ ತಂದೆಯ ಹೆಸರಿನಲ್ಲಿದ್ದರಿಂದ, ಅವುಗಳನ್ನು ಭಾಗ ಮಾಡಿಕೊಂಡು ನಮ್ಮ ನಮ್ಮ ಹೆಸರು ಹಚ್ಚಿಸಿಕೊಳ್ಳಲು ವಾದಿಯರು ಕೇಳಿದಾಗ ನಾನು ಇನಕಾರ ಮಾಡಿರುತ್ತೇನೆ ಅನ್ನುವುದು ನಿಜ. ದಾವಾ ಜಮೀನುಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಬ್ಯಾಂಕಿನಲ್ಲಿ ಸಾಲಾ ಮಾಡಲು ನಮ್ಮ ನಮ್ಮ ಹೆಸರು ದಾವಾ ಜಮೀನುಗಳಲ್ಲಿ ದಾಖಲಿಸಲು ವಾದಿಯರು ಕೇಳುತ್ತಿದ್ದಾರೆ ಅನ್ನುವುದು ನಿಜ.

ಸಿಟಿಎಸ್ ನಂಃ 2646 ಆಸ್ತಿಯನ್ನು ನನ್ನ ತಂದೆಯ ಹೆಸರಿನಲ್ಲಿ ಖರೀದಿ ಮಾಡಿದ ದಿನದಿಂದ ಸದರಿ ಆಸ್ತಿಯು ನನ್ನ ವೈವಾಟನಲ್ಲಿಯಾಗಲೀ ಅಥವಾ ನನ್ನ ಸಹೋದರರ ವೈವಾಟನಲ್ಲಿಯಾಗಲೀ ಮತ್ತು ನನ್ನ ತಂದೆಯ ವೈವಾಟನಲ್ಲಿಯಾಗಲೀ ಯಾವತ್ತು ಇದ್ದಿರಲಿಲ್ಲ ಅನ್ನುವುದು ನಿಜ. ಸದರಿ ಆಸ್ತಿ ನಮ್ಮೆಲ್ಲರ ಕಬ್ಜಾದಲ್ಲಿ ಇರದೇ ಇರುವ ಕಾರಣ ಸದರಿ ಆಸ್ತಿಯು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಅಂದರೆ ಸಾಕ್ಷಿದಾರನು ಸದರಿ ಆಸ್ತಿಯು ಕಬ್ಜಾ ಯಾರು ಹೆಸರಿನಲ್ಲಿ ಇರುವುದಿಲ್ಲ ಅನ್ನುತ್ತಾರೆ. ಸದರಿ ಆಸ್ತಿಯು ನನ್ನ ತಂದೆಯೆ ಹೆಸರಿನಲ್ಲಿ ಇರುತ್ತದೆ ಅನ್ನುವ ವಿಷಯ ವಾದಿದಿಯರಿಗೆ ಗೊತ್ತಿರಲಿಲ್ಲ ಅನ್ನುವುದು ಸುಳ್ಳು.

ದಾವಾ ಜಮೀನುಗಳನ್ನು ಹೊರತು ಪಡಿಸಿ ನಮ್ಮ ಮನೆತನಕ್ಕೆ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಅನ್ನುವುದು ಸುಳ್ಳು. ನಾನು ಹಾಗೂ ಇನ್ನುಳಿದ ಪ್ರತಿವಾದಿಯರು ವಾದಿಯವರಿಗೆ ತೊಂದರೆ ಕೊಡಲು ಉದ್ದೇಶದಿಂದ, ದಾವಾ ಜಮೀಗಳಿಗೆ ವಾರಸಾ ಮಾಡಿಕೊಳಲು ಕೊಡುತ್ತಿಲ್ಲ ಅನ್ನುವುದು ಸುಳ್ಳು. ದಾವಾ ಜಮೀನುಗಳು ಪ್ರತೇಕವಗಿ ನಮ್ಮ ನಮ್ಮ ಹೆಸರಿಗೆ ಉತಾರಗಳು ಪಡೆಯಲು ನನ್ನ ಯಾವುದೇ ತಕರಾರು ಇರುವುದಿಲ್ಲ,

<u>ಪಾಟೀ ಸವಾಲು ಃ 1, 5 ಮತ್ತು 6 ನೇ ಪ್ರತಿವಾದಿಗಳ ಪರವಾಗಿ ಎಂ ಎಸ್ ಬಿ ವಕೀಲರಿಂದಃ</u>

ಎಂ ಎಸ್ ಬಿ ವಕೀಲರು ಎಂ ಎನ್ ಕೆ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿತು )

ಓ ಹೇ ಕೇ ಸರಿ ಇದೆ                                        ನನ್ನ ಸಮಕ್ಷಮ,

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ